# ಹೀರೋಯಿಸಂ ನಟನೆ ಅಲ್ಲ

**ನಾಗಕಿರಣ್**

**ಝೀ ಕನ್ನಡ 'ಮಹಾನದಿ'ಯ ವಿಕ್ರಂಸಿಂಹ**

★ *ಮೊದಲ ಧಾರಾವಾಹಿಯ ಅನುಭವ ಹೇಗಿದೆ?*

ನಟನೆಯಲ್ಲಿ ಅಂತಹ ವ್ಯತ್ಯಾಸ ಇಲ್ಲ ನಿಜ. ಆದರೆ ಈಗಲೂ ನನಗೊಂದು ಅಳುಕು ಕಾಡುತ್ತಿದೆ. ಸಿನಿಮಾದಲ್ಲಿ ಡಬ್ಬಿಂಗ್‌ಗೆ ಅವಕಾಶ ಇರುವುದರಿಂದ ಶ್ರುತಿಕಷ್ಟ ಶಬ್ದ–ವಾಕ್ಯಗಳನ್ನು ಡಬ್ಬಿಂಗ್ ಸಂದರ್ಭದಲ್ಲಿ ಹೇಳಲು ಬಿಡಬಹುದಿತ್ತು. ಆದರೆ, ಇಲ್ಲಿ ಆ ಕ್ಷಣದಲ್ಲಿಯೇ ರೆಕಾರ್ಡಿಂಗ್ ಆಗಬೇಕು. ಇದು ಸವಾಲಾದರೂ ಭಾಷಾ ಸ್ಪಷ್ಟತೆ, ಸ್ವಚ್ಛ ಉಚ್ಚಾರಣೆಯನ್ನು ಕಲಿಯಲು ಸಹಾಯವಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಸಿನಿಮಾದಂತೆಯೇ ಧಾರಾವಾಹಿಗಳೂ ದೊಡ್ಡದಾಗಿ ನಿರ್ಮಾಣವಾಗುತ್ತಿವೆ. ಇಲ್ಲಿಯೂ ಡಾನ್ಸ್– ಫೈಟ್ ಇದೆ. ಅಷ್ಟೇ ಅಲ್ಲದೇ ಆಗಾಗ ಏರ್ಪಡಿಸುವ ಕಾರ್ಯಕ್ರಮದಲ್ಲಿ ಡಾನ್ಸ್‌ನದೇ ಸಂಭ್ರಮ. ಹೀಗಾಗಿ ಎರಡೂ ಒಂದೇ ರೀತಿಯಲ್ಲಿದೆ. ಎರಡರಲ್ಲೂ ಅದರದೇ ಆದ ಸಾಧಕ ಬಾಧಕಗಳಿವೆ. ಸಿನಿಮಾದಲ್ಲಿ ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುವ ಅವಕಾಶ. ಟಿವಿಯಲ್ಲಾದರೆ ವರ್ಷವಿಡೀ ಮನೆಯಲ್ಲಿ ಭೇಟಿಯಾಗುವ ಭಾಗ್ಯ ಇರುತ್ತದೆ.

★ *ಧಾರಾವಾಹಿಯತ್ತ ಒಲವು ಮೂಡಿದ್ದು ಹೇಗೆ?*

ಮಾಡೆಲಿಂಗ್ ಮಾಡುತ್ತಿದ್ದವನು ತೆಲುಗಿನ ಸಿನಿಮಾಕ್ಕೆ ಬಣ್ಣ ಹಚ್ಚಿದೆ. ನನ್ನ ಮೊದಲ ಸಿನಿಮಾ ತೆಲುಗಿನ 'ಸಮ್ ಥಿಂಗ್ ಸ್ಪೆಷಲ್' ಆನಂತರ 'ಮರುಜನ್ಮ' 'ವಸಂತಕಾಲ' 'ಹಿಜ್ಡಾಡು' 'ಮಳೆ ಬರಲಿ ಮಂಜೂ ಇರಲಿ' ಹೀಗೆ ಹತ್ತಾರು ಕನ್ನಡ ಸಿನಿಮಾಗಳಲ್ಲಿ ನಟಿಸಿದೆ. ತಮಿಳನಲ್ಲಿಯೂ ಒಂದೆರಡು ಸಿನಿಮಾಗಳನ್ನು ಮಾಡಿದೆ. ಅಷ್ಟರಲ್ಲಿ ನನಗೆ ಧಾರಾವಾಹಿಗೆ ಅವಕಾಶಗಳು ಬಂದವು. ಏಕೋ ನಾನೂ ಮುಂದಕ್ಕೆ ಹಾಕುತ್ತಾ ಬಂದೆ. ಶೃತಿ ನಾಯ್ಡು ಅವರು ನಿರ್ಮಿಸುತ್ತಿರುವ 'ಮಹಾನದಿ'ಗೆ ಮನಸೋತೆ. ತುಂಬಾ ಒಳ್ಳೆಯ ತಂಡ. ಅವಕಾಶ ನೀಡಿ ಟಿವಿಲೋಕವನ್ನು ಪರಿಚಯಿಸಿದ ಅವರಿಗೆ ನಾನು ಕೃತಜ್ಞ.

★ *ನಟನಾಗಿದ್ದು ಆಕಸ್ಮಿಕವೇ ಹೇಗೆ?*

ಇಲ್ಲ ಉದ್ದೇಶಪೂರ್ವಕ. ಈ ಸಂಬಂಧ ನಾನು ಹೈದರಾಬಾದ್‌ನಲ್ಲಿ 'ಸತ್ಯಂ' ನಟನೆ ಮತ್ತು ನಿರ್ಮಾಣ ಸಂಸ್ಥೆಯಲ್ಲಿ ಎರಡು ವರ್ಷ ತರಬೇತಿ ಪಡೆದೆ. ಅಷ್ಟರಲ್ಲಾಗಲೇ ನಾನು ಮಾಡೆಲಿಂಗ್‌ನಿಂದ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೆ. ಈಗ ಸಿನಿಮಾ ನನ್ನ ಬದುಕು. ಮುಂದೆ ನಾನೇ ಕಾನೂನಿಗೆ ಸಂಬಂಧಿಸಿದಂತೆ ಸಿನಿಮಾ ಮಾಡುವ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ.

★ *ನಟನೆಗೆ ಸಂಬಂಧಿಸಿದಂತೆ ನಿಮ್ಮ ನಿರೀಕ್ಷೆಗಳು ಏನಿರುತ್ತದೆ?*

ಸಿನಿಮಾಕ್ಕೆ ಕಥೆಯೇ ಮೊದಲ ಭೂಮಿಕೆ. ಇಲ್ಲಿ ಪಾತ್ರದ ಹೀರೋಯಿಸಂಗಿಂತಲೂ ನನಗೆ ಪಾತ್ರದ ನಿರ್ವಹಣೆ, ಅದರ ಪಾಮುಖ್ಯ ಮುಖ್ಯವಾಗುತ್ತದೆ. ಇದೇ ಕಾರಣಕ್ಕೆ 'ಮಸ್ತ್ ಮಜಾ ಮಾಡಿ'ಯಲ್ಲಿನ ಮೂಗನ ಪಾತ್ರ ನನಗೆ ತುಂಬಾ ಇಷ್ಟ. ಸಿನಿಮಾದಲ್ಲಿ ಸುಮಾರು ಸಂದರ್ಭಗಳಲ್ಲಿ ನಮ್ಮ ನಿರೀಕ್ಷೆಗಳೇ ಉಲ್ಟಾ ಆಗುತ್ತವೆ. ನಮ್ಮಿಷ್ಟಕ್ಕಿಂತ ವೀಕ್ಷಕನ ಇಷ್ಟವೇ ಬೇರೆಯಾಗಿರುತ್ತದೆ ಎನ್ನುವುದೂ ನನ್ನ ಅನುಭವಕ್ಕೆ ಬಂದಿದೆ. ಹೀಗಾಗಿ ಪಾತ್ರದ ನಿರ್ವಹಣೆ ಸವಾಲನ್ನು ಒಡ್ಡುವಂತಿರಬೇಕು. ಕನಸು ಕಟ್ಟಿಕೊಂಡ ಕೆಲವು ಸಿನಿಮಾಗಳು ಕೈ ಕೊಟ್ಟುಬಿಟ್ಟಿವೆ. ಇದಕ್ಕೆಲ್ಲಾ ಬೇಜಾರು ಮಾಡಿಕೊಳ್ಳಲು ಆಗುವುದಿಲ್ಲ. ಕೆಲವೊಂದು ಸಿನಿಮಾ ತೆರೆಯನ್ನೇ ಕಾಣುವುದಿಲ್ಲ.



★ *ವಿಕ್ರಂಸಿಂಹನ ಪಾತ್ರವನ್ನು ಹೇಗೆ ನಿಭಾಯಿಸುತ್ತಿದ್ದೀರಿ?*

ಇದು ವಾಸ್ತವಿಕ ಕಥೆಯನ್ನು ನಿರೂಪಿಸುವ ಪಾತ್ರ. ಇದರಲ್ಲಿ ನಾನೊಬ್ಬ ರಾಜಕಾರಣಿ. ರಾಜಕೀಯ ಎಂದರೆ ಎಷ್ಟೆಲ್ಲಾ ಕ್ರೂರವಾದ ವಿರೂಪ ಪಡೆದಿದೆಯೋ ಅದೆಲ್ಲವನ್ನೂ ಒಳಗೊಂಡ ಮೂರ್ತರೂಪ ವಿಕ್ರಂಸಿಂಹ. ನನ್ನ ಸ್ವಭಾವಕ್ಕೂ ಪಾತ್ರದ ಗುಣಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಅದನ್ನು ನಿಭಾಯಿಸುವುದೇ ನಿಜವಾದ ನಟನೆ. ಅತ್ಯಂತ ದುಷ್ಟ, ದ್ವೇಷದಿಂದ ತನ್ನ ಉದ್ದೇಶಿತ ಕಾರ್ಯ ಸಾಧನೆ ಮಾಡುವ ಕಂತ್ರಿ ಗುಣ ಈ ಪಾತ್ರದ ವಿಶೇಷ. ಈಗಷ್ಟೇ ಆರಂಭವಾಗಿದೆ. ಸದ್ಯ ಅವನು ಪ್ರೀತಿ– ಪ್ರೇಮದ ಗುಂಗಿನಲ್ಲಿದ್ದಾನೆ. ಮುಂದಿನದ್ದು ಏನು ಎನ್ನುವ ಕುತೂಹಲ ನನಗೂ ಇದೆ.

■ ರಾಗು